RNU AIR DHARWAD

FEBRUARY 27, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಜ್ಯದಲ್ಲಿ ಒಟ್ಟು ಶೇಕಡ 50 ರ ಮೀಸಲು** ಮಿತಿಯಲ್ಲಿಯೇ, ಮುಂದಿನ 30 ದಿನಗಳಲ್ಲಿ, 53 ಸಾವಿರದ 432 ನೇರ ನೇಮಕಾತಿ ಹುದ್ದೆ ಭರ್ತಿ ಮಾಡುವ ಮಹತ್ವದ ನಿರ್ಧಾರವನ್ನು, ರಾಜ್ಯ ಸಚಿವ ಸಂಪುಟ ಕೈಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ ಪಾಟೀಲ್ ಹೇಳಿದರು. ಬೆಂಗಳೂರು ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಚಿವ ಸಂಪುಟ ಸಭೆಯಲ್ಲಿ, 2022 ರ ಮೊದಲು ಜಾರಿಯಲ್ಲಿದ್ದ, ಶೇಕಡ 50 ರಷ್ಟು ಮೀಸಲಾತಿ ಹಾಗೂ ರೋಸ್ಟರ ಬಿಂದು ಅನ್ವಯ, ನೇಮಕ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.  ಕಲ್ಯಾಣ ಕರ್ನಾಟಕ ವೃಂದದಡಿ, ಖಾಲಿ ಇರುವ 32 ಸಾವಿರದ 132 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದರು.

<><><>

**ಪ್ರಧಾನಮಂತ್ರಿಯವರ ಹೊಸ 15** ಅಂಶಗಳ, ಕಾರ್ಯಕ್ರಮದ ಅನುಷ್ಠಾನವನ್ನು ಪರಾಮರ್ಶಿಸಲು, ರಾಜ್ಯ ಸರ್ಕಾರ, ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ, ಉನ್ನತ ಮಟ್ಟದ ಮೇಲ್ವಿಚಾರಣಾ ಸಮಿತಿ ರಚಿಸಿದೆ. ಯು. ನಿಸಾರ್ ಅಹಮದ್ ಅಧ್ಯಕ್ಷತೆಯ ಸಮಿತಿ, ಫಲಾನುಭವಿ ಆಧಾರಿತ ಯೋಜನೆಗಳನ್ನು ಹೊಂದಿರುವ, ಪ್ರತಿಯೊಂದು ಸರ್ಕಾರಿ ಇಲಾಖೆ, ಶೇಕಡ 15 ರಷ್ಟು ಗುರಿಯನ್ನು, ಆಯಾ ಜಿಲ್ಲೆಯ ಅಲ್ಪಸಂಖ್ಯಾತರ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿ, ಪರಿಶೀಲಿಸಲಿದೆ.

<><><>

**ನವೀಕರಿಸಬಹುದಾದ ಇಂಧನ ಮೂಲ,** ಸೌರ ವಿದ್ಯುತ್ ಬಳಸಿಕೊಂಡು, ವಾತಾವರಣದ ತೇವಾಂಶ ಹೀರಿ, ನಿತ್ಯ 45 ರಿಂದ 50 ಲೀಟರ್ ನೀರು ಉತ್ಪಾದಿಸುವ, 'ಏರ್ ಟೂ ವಾಟರ್' ಸಾಧನವನ್ನು, ಚಾಮರಾಜ ನಗರದ, ಸೋಮವಾರಪೇಟೆಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಳವಡಿಸಲಾಗಿದೆ. ಏರೋ ವಾಟರ್ ಕಂಪೆನಿ ತಂತ್ರಜ್ಞಾನ ಆಧಾರಿತ, ಅಂತರ್ಜಲ ಅಥವಾ ಮಳೆಯನ್ನು ಅವಲಂಬಿಸದೇ, ವಾತಾವರಣದ ತೇವಾಂಶವನ್ನು ಸಾಂದ್ರೀಕರಿಸಿ, ಶುದ್ಧೀಕರಿಸಿ, ಕುಡಿಯಲು ಯೋಗ್ಯವಾದ ನೀರನ್ನು ಉತ್ಪಾದಿಸುವ ಸಾಮರ್ಥ್ಯ, ಈ ಯಂತ್ರ ಹೊಂದಿದೆ.

<><><>

**ಇಂದು, ಸ್ವಾತಂತ್ರ್ಯ ಹೋರಾಟಗಾರ,** ಕ್ರಾಂತಿಕಾರಿ ಚಂದ್ರಶೇಖರ ಆಜಾದ್ ಅವರ ಪುಣ್ಯತಿಥಿ. ಚಂದ್ರಶೇಖರ ಅಜಾದ್ ಅವರ ಅಪ್ರತಿಮ ದೇಶಭಕ್ತಿ, ತ್ಯಾಗ ಹಾಗೂ ಬಲಿದಾನವನ್ನು ಸ್ಮರಿಸಿರುವ ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ, ತಮ್ಮ ಎಕ್ಸ್ ಖಾತೆ ಮೂಲಕ ಗೌರವ ಪೂರ್ಣ ನಮನಗಳನ್ನು ಸಲ್ಲಿಸಿದ್ದಾರೆ.

<><><>

**ಮೈಸೂರು ರಾಜ್ಯದ ಪ್ರಥಮ** ಮುಖ್ಯಮಂತ್ರಿ, ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಏಕೀಕರಣದ ರೂವಾರಿ, ಕೆ.ಸಿ ರೆಡ್ಡಿ ಅವರ ಪುಣ್ಯ ಸ್ಮರಣೆಯ ದಿನವಾದ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಗೌರವ ನಮನಗಳನ್ನು ಸಲ್ಲಿಸಿದ್ದಾರೆ.

<><><>

**ರಾಜ್ಯಾದ್ಯಂತ, ನಾಳೆಯಿಂದ ದ್ವಿತೀಯ** ಪಿಯುಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿದ್ದು,  ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮೂಡುಬಿದಿರೆ, ಉಳ್ಳಾಲ ಹಾಗೂ ಮುಲ್ಕಿ ತಾಲೂಕಿನ ಒಟ್ಟು 33 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಕೇಂದ್ರಗಳ ಸುತ್ತ 200 ಮೀಟರ್ ಪರಿಧಿಯಲ್ಲಿ ನಿ ೀಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಮಂಗಳೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಆಯುಕ್ತ ಮಿಥುನ್ ಎಚ್.ಎನ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

<><><>

**ಧಾರವಾಡದ ಶೈಕ್ಷಣಿಕ ಪ್ರಗತಿಗೆ ವಿಶೇಷ ಕೊಡುಗೆ ನೀಡಿದ, ಸರ್ ಸಿದ್ದಪ್ಪ ಕಂಬಳಿ** ಅವರ ಪ್ರತಿಮೆ ಅನಾವರಣ ಕಾರ್ಯಕ್ರಮ, ಈ ಮಧ್ಯಾಹ್ನ ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜನೆಗೊಂಡಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸರ್ ಸಿದ್ದಪ್ಪ ಕಂಬಳಿ ಅವರ ಪ್ರತಿಮೆ ಅನಾವರಣಗೊಳಿಸಲಿದ್ದಾರೆ.

<><><>

**ಹುಬ್ಬಳ್ಳಿ, ಕೆ.ಎಸ್.ಸಿ.ಎ ಕ್ರೀಡಾಂಗಣದಲ್ಲಿ** ಜರುಗುತ್ತಿರುವ, ರಣಜಿ ಟ್ರೋಫಿ ಕ್ರಿಕೆಟ್ ಫೈನಲ್ ಪಂದ್ಯದ, ನಾಲ್ಕನೇ ದಿನವಾದ ಇಂದು, ಜಮ್ಮು ಕಾಶ್ಮೀರ ತಂಡ ನೀಡಿದ 584 ರನ್ ಗುರಿ ಬೆನ್ನತ್ತಿದ್ದ ಕರ್ನಾಟಕ ತಂಡ, ತನ್ನ ಪ್ರಥಮ ಇನ್ನಿಂಗ್ಸ ನಲ್ಲಿ ಇತ್ತೀಚಿನ ವರದಿ ಬಂದಾಗ ತನ್ನೆಲ್ಲ ವಿಕೆಟ್ ಕಳೆದುಕೊಂಡು, 293 ರನ್ ಗಳಿಸಿದೆ. ಆ ಮೂಲಕ ಜಮ್ಮು ಕಾಶ್ಮೀರ ತಂಡ, ಒಟ್ಟು 291 ರನ್ ಗಳ ಮುನ್ನಡೆ ಸಾಧಿಸಿದೆ.

<><><>

**ಉಡುಪಿಯ, ಆದಿಮ ಕಲಾ ಟ್ರಸ್ಟ್‌,** ತನ್ನ ಮೊದಲ ವಾರ್ಷಿಕೋತ್ಸವದ ಸವಿ ನೆನಪಿಗಾಗಿ, ಖ್ಯಾತ ಪುರಾತತ್ವ ವಿದ್ವಾಂಸ, ಧಾರವಾಡದ ರವೀಂದ್ರ ಕೋರಿಶೆಟ್ಟರ ಅವರಿಗೆ, ಆದಿಮ ಕಲಾ ರತ್ನ ರಾಷ್ಟ್ರೀಯ ಪ್ರಶಸ್ತಿ ಪ್ರಕಟಿಸಿದೆ. ಪ್ರಶಸ್ತಿ 25 ಸಾವಿರ ರೂಪಾಯಿ ನಗದು ಹಾಗೂ ಫಲಕ ಒಳಗೊಂಡಿದೆ ಎಂದು, ಟ್ರಸ್ಟಿನ ಸ್ಥಾಪಕ ಸಂಚಾಲಕ, ಪ್ರೊಫೆಸರ್ ಟಿ. ಮುರುಗೇಶಿ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>